

ಮಕ್ಕಳಿಗೆ ವ್ಯಾಕರಣ ಕಲಿಸುವುದು ಹೇಗೆ?

ಮಕ್ಕಳಿಗೆ ವ್ಯಾಕರಣ ಕಲಿಸುವುದು ಎಂದರೆ ಬಾಯಿಪಾಠ ಮಾಡಿಸುವುದಲ್ಲ. ವ್ಯಾಕರಣದ ಕಲಿಕೆ ದೈನಂದಿನ ಅರಿವಿನ ಭಾಗವಾಗಬೇಕು. ಒಳ್ಳೆಯ ಬರಹಗಳಲ್ಲಿ ಬಳಕೆಯಾಗುವ ವಾಕ್ಯಗಳನ್ನು ಬಿಡಿಸಿ ತೋರಿಸಿ, ಅಂತಹವೇ ವಾಕ್ಯಗಳನ್ನು ಬರೆಯಲು ಕಲಿಸುವಾಗಲೂ ವ್ಯಾಕರಣದ ನಿಯಮಗಳನ್ನು ತಿಳಿಸಬಹುದು.

ಡಿ.ಎನ್. ಶಂಕರ ಭಟ್

ವ್ಯಾಕರಣವನ್ನು ಕಲಿಯುವುದರಿಂದ ಮಕ್ಕಳಿಗೆ ಹೆಚ್ಚು ಸರಾಗವಾಗಿ ಓದಲು ಬರಬಹುದು ಮತ್ತು ತಪ್ಪಿಲ್ಲದೆ ತುಂಬಾ ಚೆನ್ನಾಗಿ ಬರೆಯಲು ಬರಬಹುದು ಎಂಬ ಅನಿಸಿಕೆ ಹಲವರಲ್ಲಿದೆ. ಆದರೆ, ಇದುವರೆಗೆ ನಡೆಸಿದ ನೂರಾರು ಸಂಶೋಧನೆಗಳಲ್ಲಿ ಯಾವೊಂದು ಸಂಶೋಧನೆಯೂ ನೇರವಾಗಿ ವ್ಯಾಕರಣವನ್ನು ಒಂದು ವಿಷಯವಾಗಿ ಕಲಿಸುವುದರಿಂದ ಮಕ್ಕಳ ಓದಿನ ಇಲ್ಲವೇ ಬರವಣಿಗೆಯ ಮಟ್ಟ ಮೇಲೇರುತ್ತದೆ ಎಂಬುದನ್ನು ತೋರಿಸಿಕೊಟ್ಟಿಲ್ಲ. ಇದಕ್ಕೆ ಬದಲು, ವ್ಯಾಕರಣವನ್ನು ನೇರವಾಗಿ ಕಲಿತ ಮಕ್ಕಳಿಗೂ ಕಲಿಯದ ಮಕ್ಕಳಿಗೂ ನಡುವೆ ಯಾವ ವ್ಯತ್ಯಾಸವೂ ಇಲ್ಲ ಎಂಬುದಾಗಿ ಅವು ತೋರಿಸಿಕೊಟ್ಟಿವೆ.

ಇದನ್ನು ಗಮನಿಸಿದ ಹಲವು ತಿಳಿವಿಗರು ಓದು–ಬರಹದ ಕಲಿಕೆಗೆ ವ್ಯಾಕರಣದ ಕಲಿಕೆಯಿಂದ ಯಾವ ಬಗೆಯ ನೆರವೂ ಸಿಗುವುದಿಲ್ಲವಾದರೆ, ಅದನ್ನು ಕಲಿಸುವುದಕ್ಕಾಗಿ ಮಕ್ಕಳ ಸಮಯವನ್ನು ಯಾಕೆ ಹಾಳುಮಾಡಬೇಕು ಎಂಬ ಪ್ರಶ್ನೆಯನ್ನೆತ್ತಿದ್ದರು ಮತ್ತು ಅದನ್ನು ಮಕ್ಕಳ ಕಲಿಕೆಯಿಂದ ಹೊರಗಿಡುವುದೇ ಒಳ್ಳೆಯದು ಎಂಬ ತೀರ್ಮಾನಕ್ಕೂ ಬಂದಿದ್ದರು. ಆದರೆ, ನಿಜಕ್ಕೂ ಇದೊಂದು ಗಡಿಬಿಡಿಯ ತೀರ್ಮಾನವಾಗಿತ್ತು. ಯಾಕೆಂದರೆ, ಯಾವ ಕೆಲಸವೇ ಆಗಲಿ, ಅದನ್ನು ಜಾಣ್ಮೆಯಿಂದ ನಡೆಸಬೇಕೆಂದಿರುವವರಿಗೆ ಅದರ ಒಳಗುಟ್ಟಿನ ತಿಳಿವು ಒಂದಲ್ಲ ಒಂದು ಬಗೆಯಲ್ಲಿ ನೆರವಿಗೆ ಬಾರದೆ ಇರುವುದಿಲ್ಲ. ಉದಾಹರಣೆಗೆ, ಕಾರಿನ ಬೇರೆ ಬೇರೆ ಅಂಗಗಳ ಗುರಿ, ಅವುಗಳ ಅಳವು–ನಲುವುಗಳು, ಅವುಗಳ ಕೆಲಸದ ಮೇಲೆ ಗಾಳಿ, ಮಳೆ, ಬಿಸಿಲು ಇಲ್ಲವೇ ದಾರಿಯ ಗೊತ್ತುಪಾಡುಗಳಿಂದ ಉಂಟಾಗಬಹುದಾದ ಅಡಚಣೆಗಳು ಮೊದಲಾದುವನ್ನು ಸರಿಯಾಗಿ ತಿಳಿದುಕೊಂಡಿರುವವರು ಕಾರನ್ನು ಓಡಿಸುವ ಕೆಲಸವನ್ನು ಹೆಚ್ಚು ಜಾಣ್ಮೆಯಿಂದ ನಡೆಸಬಲ್ಲರು.

ಓದುವ ಮತ್ತು ಬರೆಯುವ ಕೆಲಸಗಳೂ ಹೀಗೆಯೇ. ಅವುಗಳ ಒಳಗುಟ್ಟನ್ನು ತಿಳಿದುಕೊಂಡವರಿಗೆ ಅವನ್ನು ಹೆಚ್ಚು ಸುಲಭವಾಗಿ ಮತ್ತು ಹೆಚ್ಚು ಚೆನ್ನಾಗಿ ನಡೆಸಲು ಬರುತ್ತದೆ. ಆ ಕೆಲಸಗಳಲ್ಲಿ ವ್ಯಾಕರಣದ ನಿಯಮಗಳನ್ನು ಬಳಸಬೇಕಾಗುವುದರಿಂದ, ಅವುಗಳ ತಿಳಿವೂ ಅವರಿಗೆ ಒಂದಲ್ಲ ಒಂದು ಬಗೆಯ ನೆರವನ್ನು ನೀಡುತ್ತವೆ. ಆದರೆ, ಶಾಲೆಗಳಲ್ಲಿ ಈ ವ್ಯಾಕರಣದ ನಿಯಮಗಳನ್ನು ಮಕ್ಕಳಿಗೆ ಅವರ ಓದುವ ಇಲ್ಲವೇ ಬರೆಯುವ ಕೆಲಸದಲ್ಲಿ ಬಳಸಿಕೊಳ್ಳಲು ಬರುವ ಹಾಗೆ ಕಲಿಸದೆ, ಬೇರೆಯೇ ಒಂದು ವಿಷಯವಾಗಿ